953 (398) ಶ್ರೀ ಶಂಕರಲಿಂಗೇಗೌಡ ಹೆಚ್ ಎನ್ (ಚಾಮರಾಜ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದಾದ್ಯಂತ ಹೊಸದಾಗಿ ಕಾರ್ಖಾನೆಗಳನ್ನು ಸ್ಥಾಪಿಸಲು ಮುಂದೆ ಬಂದಿರುವ ಸಂಸ್ಥೆಗಳಾವುವು, ಸ್ಥಾಪನೆಯಾಗುವ ಕಾರ್ಖಾನೆಗಳ ಸ್ಥಳಗಳಾವುವು,

ಆ) ಉದ್ದೇಶಿತ ಹೊಸ ಕಾರ್ಖಾನೆಗಳಲ್ಲಿರುವ ಉದ್ಯೋಗ ಅವಕಾಶ ಎಷ್ಟು, (ವಿವರ ನೀಡುವುದು)

ಇ) ಉದ್ದೇಶಿತ ಕಾರ್ಖಾನೆಗಳು ಉತ್ಪಾದಿಸುವ ಉತ್ಪನ್ನಗಳು ಯಾವುವು, (ವಿವರ ನೀಡುವುದು)

ಈ) ಮೈಸೂರು ನಗರ ಹಾಗೂ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ಏಪ್ರಿಲ್ 2004 ರಿಂದ 1129 ಯೋಜನೆಗಳಿಗೆ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯು ಹಾಗೂ 121 ಯೋಜನೆಗಳಿಗೆ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯು ಅನುಮೋದನೆ ನೀಡಿರುತ್ತದೆ

ಆ) ಸದರಿ ಅನುಮೋದಿತ ಯೋಜನೆಗಳಿಂದ 2326941 ಜನರಿಗೆ ಉದ್ಯೋಗ ಅವಕಾಶ ಸಿಗುವ ನಿರೀಕ್ಷೆಯಿದೆ

ಇ) ಅನುಮೋದಿತವಾಗಿರುವ ಯೋಜನೆಗಳಲ್ಲಿ ಮುಖ್ಯವಾಗಿ ಐಟಿ/ಬಿಟಿ, ಸ್ಟೀಲ್, ಸಿಮೆಂಟ್, ಸಕ್ಕರೆ, ಆಟೋಮೊಬೈಲ್ಸ್, ಹೈಟೆಕ್ ಇಂಜಿನಿಯರಿಂಗ್ ಫಾರ್ಮಾಸ್ಯುಟಿಕಲ್ಸ್, ಆಗ್ರೋ ಬೇಸೆಡ್ ಇಂಡಸ್ಟ್ರೀಸ್ ಪೆಟ್ರೋ ಕೆಮಿಕಲ್ಸ್, ಜವಳಿ ಇತ್ಯಾದಿ ಇರುತ್ತದೆ

ಈ) ಮೈಸೂರು ಜಿಲ್ಲೆಯಲ್ಲಿ ಈವರೆಗೆ 5787 ಎಕರೆ ಜಮೀನನ್ನು ಕೆ ಐ ಎ ಡಿ ಬಿ ಇವರ ವತಿಯಿಂದ ಸ್ವಾದೀನ ಪಡಿಸಿಕೊಳ್ಳಲಾಗಿದೆ ಇದರಲ್ಲಿ 3393 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಹಾಗೂ ಉಳಿದ 2394 ಎಕರೆ ಪ್ರದೇಶವನ್ನು ಏಕ ಘಟಕ ಸಂಕೀರ್ಣಗಳಿಗಾಗಿ ಇರುತ್ತದೆ ಇದಲ್ಲದೆ ಈಗ 3937 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕೆ ಸ್ವಾಧೀನ ಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ